ನೀಲಿ ಬಾನಲ್ಲಾಡುವ ಕೆಂಪು ಗಾಳಿಪಟವನ್ನು ಸಾಧನಳ ಜಿಂಕೆ ಕಂಗಳಂಥ ಕಣ್ಣುಗಳು ಎವೆ ಬಡಿಯದೆ ನೋಡುತ್ತಿವೆ. ಆ ಮೋಹಕ ನಯನಗಳ ಕಪ್ಪು ದುಂಡು ಕಣ್ಣಾಲಿಗಳಲ್ಲಿ ಪಡಿನೆರಳು ಕುಳಿತಿದೆ. ಗಾಳಿ ಜೊತೆ ಹಾರಾಡುವ ಅದರ ಸೋಜಿಗದ ಮೋಜು, ಕಣ್ಣೋಟಕ್ಕೆ ಅಂದವಾಗಿ ಮಲ್ಲಿಗೆ ಮನಕ್ಕೆ ಮುದವಾಗಿದೆ. ಮನಸೂರೆಗೊಳಿಸುವ ಮಧುಬಾಲೆಯ ನೀಳ ತಲೆಗೂದಲು, ಅಗಲ ಹಣೆ ಅಲಂಕರಿಸಿದ ಕೆಂಪು ಸಿಂಧೂರ. ಅಲ್ಲಿ ನಯವಾಗಿ ಇಳಿ ಬಿದ್ದ ಮುಂಗುರುಳು. ಕಡ್ಡಿ ಗೆರೆ ಎಳೆದಂತೆ ಬರೆದ ನಿಡಿದು ಕುಡಿಹುಬ್ಬುಗಳು. ನಿಡುಮೂಗಿನಲ್ಲಿ ಹೊಳೆವ ಚಿನ್ನದ ಮೂಗುತಿ. ಚಿಗುರು ತುಟಿಗಳಲ್ಲಾಡುವ ಸೆಳಪಿನ ತುಂಟನಗೆ, ದುಂಡುಮುಖದ ಕಾಂತಿಗೆ ಬೆಳಕಾಗಿತ್ತು. ಹಚ್ಚಹಸಿರು, ಬಿರುಬೆಟ್ಟದ ತುದಿಯಲ್ಲಿ ನಿಂತು ನೋಡುವ ಆಕೆಯ ಕಣ್ಣಂಚಿನ ಸೆಳೆತದಿಂದ ಬಿಳಿ ಮುಗಿಲಲ್ಲಿ ತೇಲಾಡುವ ಗಾಳಿಪಟ ಕಣ್ಮರೆಯಾಯಿತು. ಮನ ಸಂತಸದ ಅಲೆಯಲ್ಲಿ ಪುಳಕಿತವಾಯಿತು. ನೇಸರನ ತೆಳು ಬಿಸಿಲು ಕಾಡಿನ ಗಿಡಮರಗಳ ರೆಂಬೆಕೊಂಬೆಗಳಲ್ಲಿ ಇಳಿಜಾರಿ ಹಸಿರೆಲೆಗಳಲ್ಲಿ ಓಲಾಡುತ್ತ ಎಲ್ಲೆಡೆ ಬೆಳ್ಳಿಬೆಳಕು ಚೆಲ್ಲಾಡಿದೆ. ಅಂಬರ ಚುಂಬಿಸುವಂತೆ ನೆಟ್ಟಗೆ ಮುಖ ಮಾಡಿ ಮೈಚಾಚಿ ಕೊಂಡು ವಿಶಾಲವಾಗಿ ಬೆಳೆದ ನಿಬಿಢ ಮರಗಳಲ್ಲಿನ ತಣ್ಣನೆ ಮೌನ, ಕಾಡಿನ ಮಹಾನಿಧಿಯಾಗಿದೆ. ಆಕಾಶ ಗಂಗೆಯಂತೆ ಕಂಗೊಳಿಸಿ ಜುಳು ಜುಳು ಉಸಿರಾಡುತ್ತ ಜೀವ ತುಂಬಿ ಹರಿಯುವ ಸರೋವರ, ಅದರ ನಿನಾದದಲ್ಲಿ ಒಂದು ಸಂಗೀತವಿದೆ.

ಗಿರಿ ಮೇಲಾಡುವ ಸಾಧನ ಬೆಟ್ಟ ಹತ್ತಿ ಬೆಟ್ಟ ಇಳಿಯುತ್ತ ಕೊಳದ ಬಳಿ ಬಂದು ಹರಿಯುವ ನೀರು ಅಂಗೈಯಲ್ಲಿ ತುಂಬಿಕೊಂಡು ಮುಖಕ್ಕೆ ಎರಚಿದಳು. ಹಾಲುಗಲ್ಲಕ್ಕೆ ಹಾಯ್! ಎನಿಸಿತು. ಹನಿ ನೀರಿನಿಂದ ರಂಜಿತವಾದ ಒದ್ದೆ ಮುಖ ತಾವರೆಯಂತೆ ರಂಜಿಸಿತು. ಕಾಲುದಾರಿಯಲ್ಲಿ ನಿಂತ ಸಾಲುಮರಗಳ ಹಸಿರೆಲೆಗಳಲ್ಲಿ ಕುಣಿಯುವ ಹಳದಿ ಹೂವು ಉದುರಿ, ಕಪ್ಪು ನೆಲಕ್ಕೆ ಹಳದಿ ಬಣ್ಣ ಎರಚಿದಂತೆ ಅವಿತುಕೊಂಡಿವೆ. ಈ ದಾರಿ ಮೇಲೆ ಸೈಕಲ್ ತುಳಿಯುತ್ತಾ ಹಸುರಿನ ಗಿರಿಗಳ ಮೆರಗು ಸೆಳೆಯುತ್ತಾ ಬದಿಗಿದ್ದ ಗಿಡ ಮರ ಬೆಟ್ಟ ಹಿಮ್ಮೆಟ್ಟಿಸುತ್ತಾ ಒಬ್ಬ ಯುವಕ ಮಿಂಚಿನ ವೇಗದಲ್ಲಿ ಮುನ್ನುಗ್ಗಿ ಬರುತ್ತಿದ್ದಾನೆ. ಹಾಲಿನಂಥ ಬಿಳಿ ಬಣ್ಣ ಆತ ತೊಟ್ಟ ಶರ್ಟ್‌ನದ್ದು. ಕಾಡಿನ ಸೊಬಗು ಕಣ್ಣೋಟಕ್ಕೆ ಹಬ್ಬವಾಗಿ ಮನಸಿಗೆ ಮಹೋತ್ಸವವಾಗಿದೆ. ಉಲ್ಲಾಸ, ಉತ್ಸಾಹದ ಎಳೆಗಾಳಿ ಎಲ್ಲಡೆ ಬೀಸುತ್ತಿದೆ. ಎದೆಗೂಡಿನೊಳಗೆ ಪಿಳಪಿಳನೆ ಕಣ್ ರೆಪ್ಪೆ ಬಡಿಯುವ ನೂರಾರು ಆಸೆಗಳಿಗೆ ಈಗ ಜೀವ ತುಂಬಿದೆ.

ಕೆಂಪು ಬಿಳಿ ಬಣ್ಣದ ಬಸ್ಸು ಸಂಚರಿಸುತ್ತಿದೆ. ಹಿಂದೆ ಫ್ರೆಂಚ್‌ಕಟ್ ದಾಡಿ ಬಿಟ್ಟ ಬಿಳಿ ತಲೆ ಸಹ ಪ್ರಾಧ್ಯಾಪಕ ಕಮಾಂಡರ್ ಜೀಪ್ ಚಾಲಿಸುತ್ತಾ ಸಾಗುತ್ತಿದ್ದಾನೆ. ಕೊರಳಿಗೆ ಕಪ್ಪು ಕ್ಯಾಮೆರಾ ಜೋತಾಡುತ್ತಿದೆ. ಬಿಡುವು ಸಿಕ್ಕಾಗ ಕಾಡೆಲ್ಲಾ ಅಲೆಯುತ್ತಾ ರಸ್ತೆ ಮೇಲೆ ಸಾಗಿ ಹೋಗುವ ವಾಹನಗಳಿಗೆ ಬಲಿಯಾಗಿ ಅಪ್ಪಚ್ಚಿಯಾದ ಪ್ರಾಣಿಗಳನ್ನು ಛಾಯಾಚಿತ್ರದಲ್ಲಿ ಸೆರೆಹಿಡಿಯುತ್ತಿದ್ದ. ಇದನ್ನು ಕಂಡು ನೋಡುಗರು ಮುಸುಮುಸು ನಗುತ್ತಿದ್ದರು. ನಗೆ ಮರೆತು ಆತನಿಗೆ ಕೇಳಿದರೆ ಇವುಗಳ ಮೇಲ್ಲೊಂದು ಸಂಶೋಧನಾ ಬರಹ ಬರೆದು ಪ್ರಕಟಿಸುತ್ತೇನೆಂದು ರೀಲ್ ಬಿಡುತ್ತಿದ್ದ. ಅಲ್ಲಲ್ಲಿ ಕಾರ್ಮಿಕರು ಗಿಡ ಮರಗಳ ಸುತ್ತಮುತ್ತ ನೀರು ನಿಲ್ಲುವಂತೆ ಗುದ್ದಲಿಯಿಂದ ಗುಂಡಿ ತೋಡುತ್ತಿದ್ದಾರೆ. ಬೆತ್ತಲೆ ಕಪ್ಪು ಬೆನ್ನ ಮೇಲೆ ಬೆನ್ನೀರಾಡುತ್ತಿವೆ, ಅವರ ಬಳಿ ಬಂದ. ಸೈಕಲ್ ಮರದ ನೆರಳಿಗೆ ನಿಲ್ಲಿಸಿದ. ಹ್ಯಾಂಡಲ್‌ಗೆ ಸಿಕ್ಕಿಸಿದ ವೃತ್ತಪತ್ರಿಕೆ ಕೆಳಗೆ ಬಿತ್ತು. ಬಿದ್ದ ಪತ್ರಿಕೆ ಕೈಗೆತ್ತಿಕೊಂಡು ಕಣ್ಣಾಡಿಸಿದ. 'ಕಾಡು ಬೆಳೆಸಿ ನಾಡು ಉಳಿಸಿ, ಪರಿಸರ ರಕ್ಷಣೆ ಜೀವಕುಲ ಸಂರಕ್ಷಣೆ...' ದಪ್ಪಕ್ಷರದ ಸಾಲುಗಳು ಆತ್ಮಸಾಕ್ಷಿಗೆ ಸವಾಲುಗಳಾದವು. ಒಂದೆಡೆ ಮುಗ್ಧಕಾರ್ಮಿಕರು ಮಣ್ಣಲ್ಲಿ ಮಣ್ಣಾಗಿ ದುಡಿದು ಗಿಡನೆಟ್ಟು ನೀರೆರೆದು ಪಾಲನೆ ಪೋಷಣೆ ಮಾಡುತ್ತ ಬೆವರು ಸುರಿಸುವರು. ಬೆವರಿಗೆ ಬೆಲೆ ಇದೆಯೇ ಬಲ್ಲವರಾರು?

ಇನ್ನೊಂದೆಡೆ ಕೈಗೊಂದು ತೊಟ್ಟು ಮಣ್ಣು ಅಂಟಿಸಿಕೊಳ್ಳದೆ ಶುಭ್ರ ಬಟ್ಟೆ ಧರಿಸಿ, ವೇದಿಕೆಯಲ್ಲಿ ನಿಂತು ಬಾಯಿ ಚಪಲಕ್ಕಾಗಿ ಗಂಟೆಗಟ್ಟಲೇ ಬಣ್ಣದ ಮಾತುಗಳಾಡುತ್ತಾ ಕೇಳುಗರಿಂದ ಚಪ್ಪಾಳೆ ಪಡೆದು ಕಾಗದ ಕುದುರೆ ಮೇಲೆ ಸವಾರಿ ಮಾಡುವ ಪ್ರವೀಣರು. ಇವರಿಗಿಂತ ಆ ಪಾಮರ ಶ್ರಮ ಜೀವಿಗಳೇ ಎಷ್ಟೋ ವಾಸಿ. ಮಾಡಲೇ ಬೇಕಾದ ಕೆಲಸ ಮಾಡಿ ಸುಮ್ಮನಿದ್ದು ಬಿಡುತ್ತಾರೆ. ಮನದಾಳದಲ್ಲಿ ಸಾಲುಮರದ ತಿಮ್ಮಕ್ಕಳ ಭಾವಚಿತ್ರ ತೇಲಿಬಂತು. ಧನ್ಯತೆಯ ಕುಸುಮ ಹೃದಯದಿಂದ ಉದುರಿತು. ಅಭಿಮಾನ ತುಂಬಿ ಬಂದು ಭಾವುಕನಾದ. ಕೈಯೊಳಗಿದ್ದ ಪತ್ರಿಕೆ ಬಿಸಾಕಿದ. ದುಡಿಯುವ ಶ್ರಮಜೀವಿಗಳಿಗೆ ನೋಡಿ ತುಂಬು ಗೌರವದಿಂದ ಕೈಮುಗಿದು ತಲೆಬಾಗಿದ. ಕಪ್ಪುಮುಖ ಬಿಳಿಗಡ್ಡಗಳಲ್ಲಿ ಸಂತಸದ ಗೆರೆಗಳಾಡಿದವು. ಕಪ್ಪು ತುಟಿ ಅರಳಿದವು. ಕೈ ಎತ್ತಿ ಆಶೀರ್ವದಿಸಿದರು. ದುಡಿಯುವ ಕೈಗಳ ಹರಸು ಬೆನ್ನಿಗೆ ತಾಕಿಸಿಕೊಂಡ. ಸವಾರಿ ಮತ್ತೆ ಮುಂದೆ ಸಾಗಿತು.

ಮರಹತ್ತಿ ಮರ ಇಳಿವ ಅಳಿಲು, ಇಳಿಬಿದ್ದ ಟೊಂಗೆಯಲ್ಲಿ ಸಾಲುಸಾಲಾಗಿ ಕುಳಿತ ಗಿಳಿವಿಂಡು. ಹೂವಿನಿಂದ ಹೂವಿನೆಡೆಗೆ ಹಾರುವ ಬಣ್ಣ ಬಣ್ಣದ ದುಂಬಿ, ಛಂಗನೆ ಜಿಗಿಯುವ ಜಿಂಕೆ ಕಣ್ಮನ ಸೆಳೆದವು. ಜಲ್ಲಿ ಮರಳಿನ ಕಿರು ಸೇತುವೆ ಮೇಲೆ ಸ್ವಾಗತ ಕೋರುವಂತೆ ಗರಿ ಬಿಚ್ಚಿ ನಿಂತ ನವಿಲು. ನಿಸರ್ಗದ ಲಾವಣ್ಯಕ್ಕೆ ಮನಸೋತು, ಅಹಂಕಾರ ಕರಗಿ ನೀರಾಯಿತು. ತನು ಪುನೀತವಾಗಿ ಮನ ಪ್ರಶಾಂತವಾಯಿತು. ಸರೋವರ ಬಳಿ ಬಂದ. ತುಂಬಿ ಹರಿಯುವ ಸರೋವರ ಶಾಂತವಾಗಿಸಿತು. ಅಲ್ಲಿ ಒಬ್ಬಳು ಸುರಸುಂದರಿ ಹರಿಯುವ ನೀರಿನೊಡನೆ ಚಕ್ಕಂದಾಡುತ್ತ ಹೊಳಪಿನ ನಗೆ ಸೂಸುತ್ತಿದ್ದಳು. ಆ ನಗೆ ಎದೆಗೂಡಿನೊಳಗೆ ಮಿಂಚಿನ ಸಂಚಲನ ಮೂಡಿಸಿತು. ಕೋಮಲ ಮುಖ ನೋಡುತ್ತಾ ಬೆರಗಾಗಿ ನಿಂತ. ಆಕೆ ಕಣ್ಣೋಟ ಇವನತ್ತ ಮೆಲ್ಲನೆ ಜಾರಿತು. ನಯನ ನೋಟಗಳಲ್ಲಿ ಭಾವನೆಗಳ ಬಣ್ಣದಾಟ ಚೆಲ್ಲಿ ಬಣ್ಣದೋಕುಳಿ ತುಂಬಿ ಹರಿಯಿತು. ನವಿಲಿನಂತೆ ಹೆಜ್ಜೆ ಇಡುತ್ತ ಬಳಿ ಬಂದಳು. 'ಯಾರು ನೀನು?' ತುಟಿ ತೆರೆಯಲಿಲ್ಲ. ಕಣ್ಣಾಲಿಗಳಲ್ಲಿ ಆಕೆಯ ಆಶಾಭರಿತ ನಯನ ತುಂಬಿಕೊಂಡಿದ್ದವು. ಮತ್ತೆ ಮರು ಪ್ರಶ್ನಿಸಿದಳು.

ಎಚ್ಚೆತ್ತುಕೊಂಡ ಮನುಜ.

'ಇಲ್ಲಿಗೇಕೆ ಬಂದೆ?'

'ಕಾಡಿನ ಸೊಬಗು ನೋಡಲು'

'ಯಾರಾದರು ನೆಂಟರಿದ್ದಾರೆಯೇ?'

'ಅಯ್ಯೋ! ನಾನು ಈ ಊರಿಗೆ ಹೊಸಬ. ಇನ್ನು ನೆಂಟರೆಲ್ಲಿ? ನಂಬಿಕೆಯಿಂದ ಮಾತನಾಡುವವರೆ ನೆಂಟರು, ಕರುಣೆ ತೋರಿಸುವವರೆ ಬಂಧುಗಳು'.

'ಎಲ್ಲಿಂದ ಬಂದೆ?'

'ಅಜಂತಾ'

'ಅಲ್ಲಿಗೇಕೆ ಹೋಗಿದ್ದೆ?'

'ಕಲೆ ಹುಚ್ಚು ಅಂಟಿಸಿಕೊಂಡು..'

'ಸಂತೋಷ, ದೇಹದೊಳಗಿನ ಉಸಿರು ಹಾರಿ ಹೋಗುವ ಮುನ್ನ ನೋಡಿ ಆನಂದಿಸಬೇಕಾದ ಪೂಜ್ಯ ರಮಣೀಯ ತಾಣ'.

ದುಂಡು ಮುಖದೊಳಗೆ ಎದ್ದು ಕಾಣುವ ಮುಗ್ಧತೆ, ಮಗು ಮಾತಾಡಿದಂತೆ ಮಾತನಾಡುವ ಮಾತು, ಜೇನಿನ ಹನಿಗಳಂತೆ ಅವಳಿಗೆ ತುಂಬಾ ಹಿಡಿಸಿದವು.

ಸಂಕೋಚಪಡುತ್ತಾ ಆತ ರಾಗ ಎಳೆದು– 'ನಿಮ್ಮ ಹೆಸರು?' ಎಂದ.

ಕಂಚಿನ ಕಂಠದಿಂದ ಸಾಧನ 'ಇದೇ ನನ್ನೂರು ಆಕಾಶಪುರ'. ತುಂಬು ಕಾಡಿನಿಂದ ಬಲು ಸುಂದರವಾಗಿದೆ.

ಮಾತಿಗೆ ಮಾತು ಬೆಳೆಯಿತು. ಮುಸ್ಸಂಜೆ ಮಬ್ಬು ಕವಿಯಿತು. ಬಣ್ಣ ಬಣ್ಣದ ಹಕ್ಕಿ ಬಾನೆಲ್ಲಾ ಗುಂಪು ಗುಂಪಾಗಿ ಹಾರುತ್ತ ಹೋದವು. ದಾರಿ ಮೇಲೆ ಎತ್ತಿನ ಬಂಡಿ ಮುಂದೆ ಮುಂದೆ ಸಾಗುತ್ತಿದೆ. ಹೆಮ್ಮರಗಳ ಕೆಳಗೆ ಸಾಧನ– ಮನುಜ ಸವಿನುಡಿಯಾಡುತ್ತ ಮನೆಯತ್ತ ನಡೆದು ಮನೆ ಅಂಗಳದೊಳಗೆ ಬಂದರು. ದೊಡ್ಡಮನೆ ತುಂಬಾ ಹಳೆ ಕಾಲದ್ದು. ವಿದ್ಯುತ್ ದೀಪದ ಬೆಳಕು ಎಲ್ಲೆಡೆ ಆವರಿಸಿಕೊಂಡಿತ್ತು. ಸಾಧನ ಒಳಗೆ ಹೋಗಿ ಹಿತ್ತಾಳೆ ಚೆಂಬಿನ ತುಂಬ ನೀರು ತುಂಬಿ ತಂದುಕೊಟ್ಟಳು. ಮುಖಕ್ಕೆ ಸಿಂಪಡಿಸಿಕೊಂಡು ಉಳಿದ ನೀರು ಕಾಲ ಮೇಲೆ ಹಾಕಿಕೊಂಡ. ಜೇಬಿನೊಳಗಿದ್ದ ಕರವಸ್ತ್ರ ತೆಗೆದು ಮುಖ ಒರೆಸಿಕೊಂಡ. ಸೈಕಲ್ ಹಿಂದೆ ಕಟ್ಟಿದ ಕೈಚೀಲ ಬಿಚ್ಚಿಕೊಂಡು ಮನೆಯೊಳಗೆ ಬಂದ. ಇಳಿ ವಯಸ್ಸಿನ ದಂಪತಿಗಳ ದರುಶನವಾಯಿತು. ನೋಡಿ ಕಕ್ಕಾಬಿಕ್ಕಿಯಾದ.

'ಮನುಜ, ಇವರು ನನ್ನ ತಂದೆ ತಾಯಿ.'

ಪೂಜ್ಯಭಾವ ತುಂಬಿ ಬಂದು ಕೈ ಮುಗಿದ.

'ಅಪ್ಪ ಈತ ಮನುಜ, ನಮ್ಮೂರಿಗೆ ಹೊಸಬ. ಉಳಿದುಕೊಳ್ಳಲು ಒಂದು ಕೋಣೆ ನೀಡಿ. ಈ ರಾತ್ರಿ ಕಳೆದು ಬೆಳಗ್ಗೆ ತನ್ನೂರಿಗೆ ಹೊರಡುತ್ತಾನೆ'. ಮುಗುಳುನಗೆ ಸೂಚಿಸುತ್ತಾ ಮಗಳ ಕೋರಿಕೆ ಆಲಿಸಿ ಒಪ್ಪಿದ. ಕೋಣೆ ಒಳಗೆ ಬಂದು ಕೈಚೀಲ ಕೆಳಗಿರಿಸಿ, ಕುರ್ಚಿ ಮೇಲೆ ಒರಗಿ ಕುಳಿತ. ಸವಾರಿ ಮಾಡಿ ದಣಿದ ದೇಹಕ್ಕೆ ಹಿತವಾಯಿತು. ಹಸಿವು ಹೊಟ್ಟೆ ಒಳಗೆ ತಾಳ ಹಾಕುತಿತ್ತು.